**ಸಿ.ಸಿ. ನಂಬ್ರ: 513/2024** **PW-1**

ದಿನಾಂಕ: 04-11-2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಸ್ ಎಸ್ ಎನ್ ರವರಿಂದ:</u>**

ಮೃತ ಅನಂತ ಆಚಾರಿ ನಮ್ಮ ಮನೆಯ ಬಳಿ ವಾಸವಿದ್ದು ಪರಿಚಯಸ್ಥರಾಗಿರುತ್ತಾರೆ. ಊಟ ತರಲು ಹೋದಾಗ ನನ್ನನ್ನು ಭೇಟಿ ಮಾಡಿರುವುದಿಲ್ಲ. ಆತನಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. 7-30ರ ಸಮಯದಲ್ಲಿ ಅವರನ್ನು ನೋಡಿರುತ್ತೇನೆ. ರಾ.ಹೆದ್ದಾರಿ 66 ಟೋಲ್ ಗೆ ಸಂಬಂಧಿಸಿದ ರಸ್ತೆ ಎಂದರೆ ಸರಿ. ಅದು ಎಕ್ಸಪ್ರೆಸ್ಸುಗೆ ಎಂದರೆ ಇರಬಹುದು. ಆಗ ನಾನು ಕೆನರಾ ಟಯರ್ ಅಂಗಡಿ ಬಳಿ ಇದ್ದೆ. ಅವರು ಬರುತ್ತಿರುವುದನ್ನು ನಾನು ನೋಡಿರುತ್ತೇನೆ. ಸದ್ರಿ ದಿನ ಆತ ಉಡುಪಿಯಿಂದ ಕುಂದಾಪುರ ರಸ್ತೆಯನ್ನು ದಾಟಿ ಕುಂದಾಪುರದಿಂದ ಉಡುಪಿಗೆ ಹೋಗುವ ರಸ್ತೆಯನ್ನು ದಾಟುತ್ತಿದ್ದರು ಎಂದರೆ ಸರಿ.

ಆತನ ಮನೆ ರಾ.ಹೆದ್ದಾರಿಯ ಪೂರ್ವದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ಆಗ ರಾತ್ರಿ ಕತ್ತಲೆಯಾಗಿತ್ತು ಎಂದರೆ ಸರಿ. ಅಧಿಕ ವಾಹನಗಳು ಅಲ್ಲಿ ಸಂಚರಿಸುತ್ತವೆ ಎಂದರೆ ಸರಿ. ನಾನು ಅಪಘಾತವಾದ ಸ್ಥಳದಿಂದ ಸುಮಾರು 50 ಅಡಿ ದೂರದಲ್ಲಿ ನಿಂತಿದ್ದೆ. ಸದ್ರಿ ನಾನು ನಿಂತಿದ್ದ ಸ್ಥಳ ಹಾಗೂ ಅಪಘಾತದ ಸ್ಥಳದ ನಡುವೆ ಸರ್ವಿಸ್ ರಸ್ತೆ ಇದೆ ಎಂದರೆ ಸರಿ. ಸದ್ರಿ ಸರ್ವಿಸ್ ರಸ್ತೆಯಲ್ಲಿ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಡಿಕ್ಕಿಪಡಿಸಿದ ಗೂಡ್ಸ್ ವಾಹನ ಯಾವ ಕಂಪೆನಿಗೆ ಮತ್ತು ಬಣ್ಣದ್ದು ಎಂದು ನನಗೆ ತಿಳಿದಿಲ್ಲ.

ಅಪಘಾತವಾದ ನಂತರ ಸಾಕಷ್ಟು ಜನರು ಸೇರಿದ್ದರು ಎಂದರೆ ಸರಿ. ಅಪಘಾತವಾಗಿದ್ದ ಕಾರಣ ಬೇರೆ ವಾಹನಗಳು ನಿಂತಿದ್ದವು ಎಂದರೆ ಸರಿ. ಗೂಡ್ಸ್ ವಾಹನ ಸುಮಾರು 20 ಅಡಿ ಮುಂದಕ್ಕೆ ಹೋಗಿ ನಿಂತಿತ್ತು. ಅದರ ನಡುವೆ ಬೇರೆ ವಾಹನಗಳು

ನಿಂತಿದ್ದವು ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ವಾಹನಕ್ಕೆ ಸಂಬಂಧಿಸಿದ ಬಿಡಿ ಭಾಗಗಳು ಬಿದ್ದಿದ್ದ ಬಗ್ಗೆ ನಾನು ಗಮನಿಸಿಲ್ಲ. ರಕ್ತಗಾಯದ ಕಲೆಗಳು ರಸ್ತೆಗೆ ತಾಗಿತ್ತು. ಸದ್ರಿ ಗೂಡ್ಸ್ ವಾಹನದಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸದ್ರಿ ದಿನ ಸಾರ್ವಜನಿಕರು ತಿಳಿಸಿದ ಮೇರೆಗೆ ಚಾಲಕನ ವಿವರಣೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ಅಪಘಾತವು ಡಿವೈಡರ್ ನಿಂದ ಕೆಳಗೆ ಇಳಿಯುತ್ತಿದ್ದಾಗಲೇ ಆಗಿರುತ್ತದೆ. ಡಿವೈಡರ್ 3 ಅಡಿ ಅಗಲ ಇರಬಹುದು. ರಾ.ಹೆದ್ದಾರಿಯಲ್ಲಿ ಪಾದಚಾರಿಗಳು ದಾಟಲು ಜೀಬ್ರಾ ಕ್ರಾಸಿಂಗ್ ಇರುತ್ತದೆ ಎಂದರೆ ಸರಿ. ಸದ್ರಿ ಸ್ಥಳದಲ್ಲಿ ಅಂತಹ ಯಾವುದೇ ಗುರುತು ಇರಲಿಲ್ಲ. ಮೃತರ ಕೈಯಲ್ಲಿ ಇದ್ದ ಊಟ ಚೆಲ್ಲಾಪಿಲ್ಲೆಯಾಗಿತ್ತು ಎಂದರೆ ಸರಿ. ಕೆನರಾ ಟಯರ್ ನ ಅಕ್ಕಪಕ್ಕದಲ್ಲಿ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಅಲ್ಲಿ ಸಾರ್ವಜನಿಕರು ಸಂಜೆ ವೇಳೆಯಲ್ಲಿ ಸೇರುತ್ತಾರೆ ಎಂದರೆ ಸರಿ. ಮೊದಲಿಗೆ ಕುಂದಾಪುರದ ಸರಕಾರಿ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಪರಿಶೀಲಿಸಿ ಕೂಡಲೇ ಮಣಿಪಾಲಕ್ಕೆ ಕಳುಹಿಸಿರುತ್ತಾರೆ. ಅಲ್ಲಿ ವೈದ್ಯರು ಅಪಘಾತ ಹೇಗೆ ಸಂಭವಿಸಿತ್ತು ಎಂಬುವುದರ ಬಗ್ಗೆ ಬರವಣಿಗೆ ಮಾಡಿದ ಬಗ್ಗೆ ತಿಳಿದಿಲ್ಲ.

ಪೊಲೀಸರು ಸೂಚಿಸಿದ ಮೇರೆಗೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಅಪಘಾತವಾದ ಮಾರನೇ ದಿನ ಠಾಣೆಗೆ ಹೋಗಿರುತ್ತೇನೆ. ಅದೇ ದಿನ ಪಂಚನಾಮೆಯನ್ನು ಜರುಗಿಸಿರುತ್ತಾರೆ. ರಕ್ತದ ಕಲೆಗಳು ಹಾಗೂ ಆಹಾರ ಬಿದ್ದಿದ್ದ ಸ್ಥಳವನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಅಪಘಾತವಾದ ಸ್ಥಳ ಪಶ್ಚಿಮದ ಅಂಚಿನಿಂದ ಒಂದು ಅಡಿ ಪೂರ್ವಕ್ಕೆ ಸಂಭವಿಸಿದೆ ಎಂದು ತೋರಿಸಿರುತ್ತೇನೆ. ಮೇಲೆ ಗುರುತಿಸಿದ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅನಂತ ಆಚಾರ್ಯ ರವರು ಪಶ್ಚಿಮದಿಂದ ಪೂರ್ವಕ್ಕೆ ಏಕಾಏಕಿ ರಸ್ತೆ ದಾಟಲು ಮುಂದಾದಾಗ ಅಪಘಾತ ಸಂಭವಿಸಿರುತ್ತದೆ ಎಂದರೆ ಹೇಳಲಾಗುವುದಿಲ್ಲ. ನಾನು ಸದ್ರಿ

ದಿನ ಕೆನರಾ ಟಯರ್ ನ ಪಕ್ಕದಲ್ಲಿ ಇದ್ದು ಅಪಘಾತವನ್ನು ಪ್ರತ್ಯಕ್ಷವಾಗಿ ಕಂಡಿಲ್ಲ ಎಂದರೆ ಸರಿಯಲ್ಲ. ಆತನ ಕುಟುಂಬದವರು ನನ್ನ ಪರಿಚಯಸ್ಥರಾದ ಕಾರಣ ಅವರಿಗೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ಘಟನಾ ಸ್ಥಳದಲ್ಲಿ ನೋಡಿಲ್ಲದೆ ಇದೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಹಾಗೂ ನಿಪಿ-1ರಲ್ಲಿ ಉಲ್ಲೇಖಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಗೂಡ್ಸ್ ವಾಹನ ಸದ್ರಿ ದಿನ ಸದ್ರಿ ರಸ್ತೆಯಲ್ಲಿ ಸಂಚರಿಸಿಲ್ಲ ಎಂದರೆ ಸರಿಯಲ್ಲ. ಬೇರೆ ಯಾವುದೋ ವಾಹನ ಅಪಘಾತ ಪಡಿಸಿದ್ದರೂ ಆರೋಪಿಯ ವಾಹನವನ್ನು ಪ್ರಕರಣದಲ್ಲಿ ಅಳವಡಿಸಿ ನನ್ನಿಂದ ಅದಕ್ಕೆ ಅನುಗುಣವಾಗಿ ದೂರನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಗುರುತಿಸಿದ ಪೋಟೋಗಳನ್ನು ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ